ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 286/2022,

ಚಾಸಾ– 3, ಪ್ರಾಸಾ –2

| | |
|---|---|
| ಹೆಸರು | ಅಬ್ದುಲ್ ಕಲಂದರ್ |
| ತಂದೆಯ ಹೆಸರು | ಕುನ್ಹಿ ಕೊಯಾ |
| ವಯಸ್ಸು | 41 ವರ್ಷ |
| ಕೆಲಸ | ಆಟೋ ಚಾಲಕ |
| ವಾಸ | ಮಾರ್ಪಾಡಿ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 22-01-2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ–1 ಮತ್ತು ಚಾಸಾ–2 ಗೊತ್ತು . ಮೃತ ಬಾವು ಬ್ಯಾರಿ ಗೊತ್ತು, ನಮ್ಮ ಊರಿನವ. ಆರೋಪಿ ಗೊತ್ತಿಲ್ಲ . ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ . ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ . ನಾನು ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿರುವುದಿಲ್ಲ .

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

1. ದಿಃ 27-12-2021 ರಂದು ಬೆಳಿಗ್ಗೆ ನನ್ನ ಆಟೋ ರಿಕ್ಷಾವನ್ನು ಬಾಡಿಗೆ ನಿಮಿತ್ತ ಚಲಾಯಿಸಿಕೊಂಡು ಮೂಡಬಿದ್ರೆಯಿಂದ ಸಂಪಿಗೆಗೆ ಕಡೆಗೆ ಹೋಗುತ್ತಾ ಬೆಳಿಗ್ಗೆ ಸುಮಾರು 9-45 ಗಂಟೆಗೆ ವಿದ್ಯಾಗಿರಿ ಕಡೆಗೆ ತಲುಪಿದಾಗ , ಮಗಂಳೂರು ಕಡೆಯಿಂದ ಒಂದು ಪೊಲೀಸ್ ಜೀಪನ್ನು ಅದರ ಚಾಲಕನು ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ಜೀಪಿನ

ಎದುರುಗಡೆಯಿಂದ ಹೋಗುತ್ತಿದ್ದ , ಟಿಪ್ಪರ್ ಒಂದನ್ನು ಓವರ್ ಟೇಕ್ ಮಾಡಿ ನನ್ನ ಆಟೋ ರಿಕ್ಷಾದ ಎದುರು ಹೋಗುತ್ತಿದ್ದ ಸ್ಕೂಟರ್ ಒಂದಕ್ಕೆ ಡಿಕ್ಕಿ ಪಡಿಸಿದ ಎಂದರೆ ಸರಿಯಲ್ಲ . ನಾನು ನನ್ನ ಆಟೋ ರಿಕ್ಷಾವನ್ನು ಬದಿಗೆ ನಿಲ್ಲಿಸಿ ಹೋಗಿ ನೋಡಲಾಗಿ , ಹೆಲ್ಮೆಟ್ ಸಹಿ ಬಿದ್ದ ಸ್ಕೂಟರ್ ಸವಾರನಿಗೆ ತಲೆಗೆ , ಮುಖಕ್ಕೆ , ಗಲ್ಲಕ್ಕೆ ಹಾಗೂ ಬಲಗಾಲಿಗೆ ತೀವ್ರ ಸ್ವರೂಪದ ಗಾಯವಾಗಿದ್ದು, ರಸ್ತೆಯ ಮೇಲೆ ಬಿದ್ದು ಅವರಿಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ .

2. ಅಲ್ಲಿ ಸೇರಿದ್ದ ಜನರು ಅವನನ್ನು ಎತ್ತಿ ಉಪಚರಿಸಿ ಆಳ್ವಾಸ್ ಆಸ್ಪತ್ರೆಗೆ ದಾಖಲಿಸುತ್ತಾರೆ ಎಂದರೆ ಸರಿಯಲ್ಲ . ಅಪಘಾತ ಪಡಿಸಿದ ಪೊಲೀಸ್ ಜೀಪ್ ಸಂಖ್ಯೆ ಕೆಎ-19 ಜಿ 0703, ಹಾಗೂ ಚಾಲಕನ ಹೆಸರು ಸುರೇಶ್ ಎಂಬುದಾಗಿ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ . ಅಪಘಾತಕ್ಕೆ ಒಳಗಾದ ಸ್ಕೂಟರ್ ನಂ. ಕೆಎ-19 ಹೆಚ್ .ಸಿ 3254 ಆಗಿರುತ್ತದೆ ಎಂದರೆ ಸರಿಯಲ್ಲ. ಬಾವು ಬ್ಯಾರಿಯವರು ಮೃತಪಡಲು ಪೊಲೀಸ್ ಜೀಪಿನ ಚಾಲಕನಾದ ಆರೋಪಿಯ ಅತೀ ವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ . ಈ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೇ ಎಂದರೆ ಸರಿಯಲ್ಲ . ಸಾಕ್ಷಿ ಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು . ದಿಃ 24-04-2022 ರಂದು ಬಾವು ಬ್ಯಾರಿಯವರು ಮೃತ ಪಟ್ಟ ಬಗ್ಗೆ ನಾನು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಮರುಹೇಳಿಕೆಯನ್ನು ಅಲ್ಲಗಳೆದ ಕಾರಣ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು .

ಅಪಘಾತವನ್ನು ಕಣ್ಣಾರೆ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲುಃ  ಆರೋಪಿಗಳ ಪರ ವಕೀಲರು ಪಾಟೀಸವಾಲು ಇಲ್ಲವೆಂದು ತಿಳಿಸಿರುತ್ತಾರೆ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ